ಇವುಗಳಲ್ಲಿ ಕುಸ್ತಿ ಮತ್ತು ಬ್ಯಾಡ್ಮಿಂಟನ್ ಹೊರತುಪಡಿಸಿದರೆ ಉಳಿದೆಲ್ಲ ವಿಭಾಗಗಳಲ್ಲಿಯೂ ಭರವಸೆ ಹುಸಿಯಾಯಿತು. ಆದರೆ ಎಲ್ಲರ ನಿರೀಕ್ಷೆಯನ್ನೂ ಮೀರಿ ಮಹಿಳಾ ಜಿಮ್ನಾಸ್ಟಿಕ್ಸ್‌ನಲ್ಲಿ ದೀಪಾ ಕರ್ಮಾಕರ್ ಕೊಂಚ ಅಂತರದಲ್ಲಿ ಕಂಚಿನ ಪದಕ ತಪ್ಪಿಸಿಕೊಂಡರು. ಆದರೆ, ದೇಶದ ಪದಕ ಗಳಿಕೆಯ ಸಾಧ್ಯತೆಯನ್ನು ವಿಸ್ತರಿಸಿದರು.

ಕಳೆದ ಎರಡೂ ಒಲಿಂಪಿಕ್ಸ್‌ಗಳಲ್ಲಿ ಪದಕ ತಂದಿದ್ದ ಬಾಕ್ಸಿಂಗ್ ಕ್ರೀಡೆಯು ಈ ಬಾರಿ ನೆಲಕಚ್ಚಲು ಅಖಿಲ ಭಾರತ ಬಾಕ್ಸಿಂಗ್ ಸಂಸ್ಥೆ ಒಳಜಗಳ ಮತ್ತು ನಿಷೇಧವೇ ಕಾರಣವಾಯಿತು. ಲಂಡನ್ ಒಲಿಂಪಿಕ್ಸ್ ಪದಕವಿಜೇತೆ ಮೇರಿ ಕೋಮ್, ಎಲ್. ಸರಿತಾದೇವಿ ಅವರು ರಿಯೊಗೆ ಅರ್ಹತೆಯನ್ನೇ ಗಿಟ್ಟಿಸಲಿಲ್ಲ. ಇದರಿಂದಾಗಿ ಮಹಿಳಾ ವಿಭಾಗದಲ್ಲಿ ಭಾರತದ ಸ್ಪರ್ಧಿಗಳೇ ಇರಲಿಲ್ಲ. ಪುರುಷರ ವಿಭಾಗದಲ್ಲಿ ಸ್ಪರ್ಧಿಸಿದ್ದ ಮೂವರಲ್ಲಿ ಯುವ ಬಾಕ್ಸರ್ ಶಿವ ಥಾಪಾ ಆರಂಭಿಕ ಸುತ್ತಿನಲ್ಲಿಯೇ ಹೊರಬಿದ್ದರು. ವಿಕಾಸ್ ಕಟುಷನ್ ಕ್ವಾರ್ಟರ್‌ಫೈನಲ್‌ನವರೆಗೂ ಹೋರಾಟ ಮಾಡಿದ್ದು ದೊಡ್ಡ ಸಾಧನೆ. ಮನೋಜಕುಮಾರ್ ಪ್ರೀಕ್ವಾರ್ಟರ್‌ವರೆಗೂ ತಮ್ಮ ಅಭಿಯಾನ ಕೊಂಡೊಯ್ದರು. ಬೆನ್ನ ಹಿಂದೆ ಬಿಎಐ ನೆರವು ಇಲ್ಲದಿದ್ದರೂ ಅವರ ಛಲದ ಹೋರಾಟ ಮೆಚ್ಚಲೇಬೇಕು.

ಆದರೆ ಎಲ್ಲಕ್ಕಿಂತ ದೊಡ್ಡ ನಿರಾಸೆಯಾಗಿದ್ದು ಶೂಟಿಂಗ್ ವಿಭಾಗದಲ್ಲಿ. 2004ರಲ್ಲಿ ರಾಜ್ಯವರ್ಧನ್ ಸಿಂಗ್ ಬೆಳ್ಳಿ, 2008ರಲ್ಲಿ ಅಭಿನವ್ ಬಿಂದ್ರಾ ಚಿನ್ನ, 2012ರಲ್ಲಿ ಗಗನ್ ನಾರಂಗ್ ಕಂಚು ಮತ್ತು ವಿಜಯಕುಮಾರ್ ಬೆಳ್ಳಿ ಪದಕಗಳ ಕಾಣಿಕೆ ನೀಡಿದ್ದರು. ಆದರೆ ಈ ಬಾರಿ ಹೋಗಿದ್ದ 12 ಮಂದಿ ಶೂಟರ್‌ಗಳು ಇಟ್ಟ ಗುರಿಗೆ ಪದಕ ಒಲಿಯಲಿಲ್ಲ. ಗಗನ್ ನಾರಂಗ್ ವಿಫಲರಾದರು. ಕೊನೆಯ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ ಬಿಂದ್ರಾ ಪದಕ ಸಾಧನೆ ಮಾಡಲಿಲ್ಲ. ನಾಲ್ಕನೇ ಸ್ಥಾನಕ್ಕೆ ಅವರು ಸಮಾಧಾನ ಪಡಬೇಕಾಯಿತು. ಯುವ ಶೂಟರ್ ಜೀತು ರೈ ಫೈನಲ್‌ನಲ್ಲಿ ಎಡವಿದರು. ಮಹಿಳೆಯರ ವಿಭಾಗದಲ್ಲಿ ಹೀನಾ ಸಿಧು ಹಿನ್ನಡೆ ಅನುಭವಿಸಿದರು.

ಆರ್ಚರಿಯಲ್ಲಿ ಅಪಾರ ನಿರೀಕ್ಷೆ ಮೂಡಿಸಿದ್ದ ಮಹಿಳಾ ಸ್ಪರ್ಧಿಗಳು ತಮ್ಮ ಪ್ರತಿಭೆಯನ್ನು ಒರೆಗೆ ಹಚ್ಚಿದ್ದು ನಿಜ. ಆದರೆ, 'ಗಾಳಿ'ಗೆ ಅಂಜಿದರು. ಬೀಸುತ್ತಿದ್ದ ಗಾಳಿಗೆ ಅನುಗುಣವಾಗಿ ಬಾಣ ಹೂಡಿ ಗುರಿ ಮುಟ್ಟಿಸುವಲ್ಲಿ ವಿಫಲರಾದರು. ಅನುಭವಿ ದೀಪಿಕಾ ಕುಮಾರಿ, ಬೊಂಬಯಾಲ ದೇವಿ, ಲಕ್ಷ್ಮೀರಾಣಿ ಮಝಿ ಅವರಿಗೆ ಪ್ರೀಕ್ವಾರ್ಟರ್ ಹಂತದ ಒತ್ತಡವನ್ನು ನಿಭಾಯಿಸಲು ಸಾಧ್ಯವಾಗಲಿಲ್ಲ. ಕೊರಿಯಾ, ರಷ್ಯಾ ಸ್ಪರ್ಧಿಗಳ ಎದುರು ಸಪ್ಪೆಯಾದರು. ಪುರುಷರ ವಿಭಾಗದ ಏಕೈಕ ಸ್ಪರ್ಧಿ ಅತನು ದಾಸ್ ಕೂಡ 16 ಘಟ್ಟಕ್ಕೆ ತಲುಪಿ ಭರವಸೆ ಮೂಡಿಸಿದ್ದರು. ಆದರೆ, ಅದು ಕೂಡ ಹುಸಿಯಾಯಿತು.

ಟೆನಿಸ್‌ನಲ್ಲಿ ಭಾರತಕ್ಕೆ ಕನಿಷ್ಠ ಎರಡು ಪದಕಗಳನ್ನು ಗೆಲ್ಲುವ ಅವಕಾಶ ಖಂಡಿತವಾಗಿಯೂ ಇತ್ತು. ಆದರೆ, ಅನುಭವಿ ಆಟಗಾರ ಲಿಯಾಂಡರ್ ಪೇಸ್ ಮತ್ತು ರೋಹನ್ ಬೋಪಣ್ಣ ಜೋಡಿಯು ಆರಂಭಿಕ ಹಂತದಲ್ಲಿಯೇ ಹೀನಾಯ ಸೋಲು ಅನುಭವಿಸಿತು. ಮಹಿಳಾ ವಿಭಾಗದಲ್ಲಿ ಭರವಸೆಯ ತಾರೆ ಸಾನಿಯಾ ಮಿರ್ಜಾ ಮತ್ತು ಪ್ರಾರ್ಥನಾ ತೊಂಬರೆ ಜೋಡಿಯು ನಿರಾಸೆ ಮೂಡಸಿತ್ತು. ಈ ಎರಡೂ ಜೋಡಿಗಳು ತಮ್ಮ ಅನುಭವ ಮತ್ತು ಸಾಮರ್ಥ್ಯಕ್ಕೆ ತಕ್ಕಂತೆ ಆಡಲಿಲ್ಲ.

'ರೋಹನ್ ಅವರು ಒಲ್ಲದ ಮನಸ್ಸಿನೊಂದಿಗೆ ಪೇಸ್ ಜೊತೆ ಕಣಕ್ಕಿಳಿದಿದ್ದ ಪರಿಣಾಮ ಇದು' ಎಂದು ಟೀಕಾಕಾರರು ಕೆಂಡಕಾರಿದರು.

ಆದರೆ ಮಿಶ್ರ ಡಬಲ್ಸ್‌ನಲ್ಲಿ ರೋಹನ್ ಮತ್ತು ಸಾನಿಯಾ ಪದಕದ ಸನಿಹ ಬಂದಿದ್ದರು. ಸೆಮಿಫೈನಲ್ ಮತ್ತು ಕಂಚಿನ ಪದಕಕ್ಕಾಗಿ ನಡೆದ ಪಂದ್ಯಗಳಲ್ಲಿ ಸೋತು ನಿರಾಸೆ ಮೂಡಿಸಿದರು. 'ಮುಂದಿನ ಒಲಿಂಪಿಕ್ಸ್‌ನಲ್ಲಿ ಆಡುತ್ತೇನೋ ಇಲ್ಲವೋ. ಇಲ್ಲಿ ಪದಕ ಗೆಲ್ಲಬೇಕಿತ್ತು' ಎಂದು ಸಾನಿಯಾ ಮಿರ್ಜಾ ಕಣ್ಣೀರು ಸುರಿಸಿದ್ದು ದೊಡ್ಡ ಸುದ್ದಿಯಾಯಿತು.

**ಹಾಕಿ: ಕ್ವಾರ್ಟರ್‌ಫೈನಲ್ ತಲುಪಿದ್ದೇ ಸಾಧನೆ**

ರಿಯೊ ಅಂಗಳದಲ್ಲಿ ಭಾರತದ ಪುರುಷರ ಹಾಕಿ ತಂಡವು ಎಂಟರ ಘಟ್ಟ ತಲುಪಿದ್ದೇ ದೊಡ್ಡ ಸಾಧನೆ. ಪ್ರತಿಭಾವಂತ ಆಟಗಾರರು ಇದ್ದ ಪಿ.ಆರ್. ಶ್ರೀಜೇಶ್ ಬಳಗಕ್ಕೆ ಪದಕ ಗೆಲ್ಲುವ ಸಾಮರ್ಥ್ಯ ಇತ್ತು. ಆದರೆ, ನಿರ್ಣಾಯಕ ಘಟ್ಟಗಳಲ್ಲಿ ಕೈಚೆಲ್ಲಿದ್ದು ದುಬಾರಿಯಾಯಿತು. ಬಿ ಗುಂಪಿನಲ್ಲಿ ಏಳು–




**ವನಿತೆಯರ ಕುಸ್ತಿಯಲ್ಲಿ ಕಂಚು ಗೆದ್ದ ಸಾಕ್ಷಿ ಮಲಿಕ್**